ಫಾರೆಸ್ಟ್ ಇಲಾಖಾ.

ಇಸ್ತಿಹಾರ್ನಾಮೆ.

ಸ್ ೧೯೦೩ನೇ ಇಸವಿ ಮೇ 13ನೇ ತಾರೀಖು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸ್ ೧೯೦೩ನೇ ಇಸವಿ ಜುಲೈ ಗುರ್ರೇ ಲಾಗಾಯಿತು ೧೯೦೪ನೇ ಜೂ ಆಖೈರ್ ವರಿಗೆ ಹನ್ನೆರಡು ತಿಂಗಳ ಪರ್ಯಂತರ ಬವರಿಂಗ್ ಪೇಟೆ ತಾಲ್ಲೂಕು ಕಾವುಸಂದ್ರದ ಸ್ಟೇಟ್ ಫಾರೆಸ್ಟ್ ಕುಂದರಸನ ಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟಿನಲ್ಲಿ ಟೋಲ್ ವಸೂಲ್ಮಾಡತಕ್ಕ ಹಕ್ಕು ೧೯೦೩ನೇ ಇಸವಿ ಜೂ 22ನೇ ತಾರೀಖಿನ ದಿವಸ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಾಗಲಿ ಅಥವಾ ಡೆಪ್ಯೂಟಿ ಕಮಿಷನರ್ ಸಾಹೇಬರವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರ್ರಿಂದಾಗಲೀ ಬಹಿರಂಗವಾಗಿ ಹರಾಜು ಮಾಡಿ ಸಲ್ಪಡುತ್ತೆ.

(2) ಚಡಸವಾಲನ್ನು ಡೆಪ್ಯೂಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರು ಅಂಗೀಕರಿಸುತ್ತಾರೆ. ಯಾವ ಸವಾಲನ್ನಾಗಲೀ ಮಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರ ಯಕ್ತ್ಯಾರಿಯಲ್ಲಿರುತ್ತೆ.

(3) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರು ಯಾವ ಸವಾಲುಗಳು ಅಂಗೀಕರಿಸುತ್ತಾರೋ ಅಂಥಾವರು ಸವಾಲ್ ಮೊಬಲಗು ಪೈಕಿ ಕಾಲು ಭಾಗದ ಮೊಬಲಗು ತಕ್ಷಣ ಡಿಪಾಜಿಟ್ ಇಡಬೇಕು. ಡೆಪ್ಯೂಟಿ ಕಮಿಷನರ್ ಸಾಹೇಬರವರಿಂದ ಹರಾಜು ಮಂಜೂರಾದ ಸಂಗತಿ ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಇರತಕ್ಕ ಮೊಬಲಗು ಪೂರ್ತಾ ಪಾವತೀ ಮಾಡಬೇಕು. ಈ ಷರತ್ತುಗಳಿಗೆ ತಪ್ಪಿದರೆ ಡಿಪಾಜಿಟ್ ಇಟ್ಟರತಕ್ಕ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಂಡು ಕಂಟ್ರಾಕ್ಟನ್ನು ದುಸರಾ ಹರಾಜು ಮಾಡಿಸುವ ದಲ್ಲದೆ ಇದರಲ್ಲಿ ಉಂಟಾಗುವ ಯಾವ ಘಾಯಿದೆಗೂ ಮೊದಲಿನ ಸವಾಲ್ದಾರನಿಗೆ ಹಕ್ಕು ಇರುವದಿಲ್ಲ. ಮತ್ತು ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಇವನನ್ನು ಗುರಿಪಡಿಸಿ ಈ ಮೊಬಲಗು ಇವನಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(4) ಈ ಕೆಳಗೆ ಕಂಡ ಷರತ್ತುಗಳು ಕಂಡು ಷರತ್ತಿಗೆ ಬದ್ಧನಾಗಿರುವಂತೆ ಕಂಟ್ರಾಕ್ಟುದಾರನು ಘಾಪಾಕಾಗದದಲ್ಲಿ ಮುಚ್ಚಳಿಕೆಯನ್ನ ಹರಾಜು ಮಂಜೂರಾದ ಬಂದು ವಾರದಲ್ಲಿ ಬರದುಕೊಟ್ಟು ವಿನಹಾ ಟೋಲ್ ವಸೂಲಿಗೆ ಅಪ್ಪಣೆ ದೊರಿಯಲಾರದು. ಕಂಟ್ರಾಕ್ಟರು ಪ್ರತಿ ದಿನವೂ ವಸೂಲ್ಮಾಡುವ ಮೊಬಲಗಿಗೆ ಬಂದು ಲೆಖ್ಖದ ಬುಕ್ಕು ಇಟ್ಟರಬೇಕು. ಇದು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ತನಿಖೇ ಮಾಡುವದಕ್ಕೆ ಬಂದಾಗ ಖುಲ್ಲಾ ಇರಬೇಕು.

(5) ಕಂಟ್ರಾಕ್ಟುದಾರನು ಈ ಕೆಳಗೆ ಕಂಡ ಟೋಲ್ ಶಿವಾಯಿ ಮತ್ಯಾವದನ್ನು ವಸೂಲ್ಮಾಡಕೂಡದು. ಮತ್ತು ಅದರಲ್ಲಿ ನಮೂದಿಸುವ ದರದಂತೆಯೇ ವಸೂಲ್ಮಾಡಬೇಕು. ಇದಕ್ಕೆ ವಿರೋಧವಾಗಿ ನಡದರೆ ಕಂಟ್ರಾಕ್ಟುದಾರನನ್ನ ಕ್ರಿಮಿನಲ್ ಪ್ರಾಸಿಕ್ಯೂಷ್ಯನ್‌ಗೆ ಗುರಿಪಡಿಸುವದಲ್ಲದೆ ಕಂಟ್ರಾಕ್ಟು ಸಹ ರದ್ದು ಮಾಡಲ್ಪಡುವದು.

(6) ಕಂಟ್ರಾಕ್ಟುದಾರನು ಮೈಸೂರ್ ಸರಹದ್ದು ಹೊರಗಿನಿಂದ ಕಾವುಸಂದ್ರ ಸ್ಟೇಟ್ ಫಾರೆಸ್ಟ್ ಮಾರ್ಗವಾಗಿ ಬರತಕ್ಕ ಸಾಮಿ ಭರ್ತಿ ಭಂಡಿಗೆ ಮಾತ್ರ ಟೋಲ್ ವಸೂಲ್ಮಾಡಬೇಕು.

(7) ಕಂಟ್ರಾಕ್ಟುದಾರನು (1) ಕುಂದರಸನಹಳ್ಳಿ, (2) ಮುತ್ತನಹಳ್ಳಿ ಈ ಎರಡು ಟೋಲ್ ಗೇಟಿನಲ್ಲಿ ಶಿವಾಯಿ ಇತರ ಸ್ಥಳದಲ್ಲಿ ಟೋಲ್ ವಸೂಲ್ಮಾಡಕೂಡದು.

(8) ಇನ್ನೇನಾದರೂ ತಪಶೀಲು ಬೇಕಾದರೆ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಗೆ ಬರದುಕೊಂಡು ತಿಳಿದುಕೊಳ್ಳಬಹುದು. ಪ್ರತಿಯೊಂದು ಸಾಮಿ ಭರ್ತಿ ಭಂಡಿಗೂ ಭಂಡಿ 1ಕ್ಕೆ ಎರಡಾಣೆಯಂತೆ ಕುಂದರಸನಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟ್‌ನಲ್ಲಿ ಟೋಲ್ ವಸೂಲ್ ಮಾಡಲ್ಪಡಬೇಕು.

ಎಸ್. ಎ. ಬಾಪುರಾವ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ನೋಟಿಫಿಕೇಷನ್.

ತಾರೀಖು 18ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಡಿಸ್ಟ್ರಿಕ್ಟ್ಸ್ ಜಂಗಲ್‌ಗಳಲ್ಲಿಯೂ ಆಕಾರ ಕಂಡ ಸರ್ಕಾರಿ ಫಡ ಜಮೀನುಗಳಲ್ಲಿಯೂ ಪೂಯ್ಯಲ್ ರಿಜರ್ವ್‌ಗಳಲ್ಲಿಯೂ ಅಂದರೆ ಈ ಕೆಳಗೆ ಕಂಡ ಸ್ಟೇಟ್ ಫಾರೆಷ್ಟ್ಸ್‌ಗಳು ಮತ್ತು ಅವ್ಯತ ಮಹಲ್ ಕಾವಲ್‌ಗಳು ವಿನಾಯಿಸಿ ಇರುವ ಜಂಗಲಿ ಫಸಾರೆ ಬಾಬು ೧೯೦೩-೦೪ನೇ ಸಾಲಿಗೆ ಅಂದರೆ ೧೯೦೩ನೇ ಜುಲೈ ಗುರ್ರೇ ಲಾಗಾಯಿತು ೧೯೦೪ನೇ ಇಸವಿ ಜೂ 30ರ ವರಿವಿಗೆ ಜವಾಯಿಸಿಕೊಳ್ಳತಕ್ಕ ಹಕ್ಕುದಾರಿಯು ಆಯಾಯ ತಾಲ್ಲೂಕು ಅಮಲ್ದಾರ್ರುಗಳಿಂದಲಾಗಲಿ ಅಥವಾ ಡೆಪ್ಯೂಟಿ ಅಮಲ್ದಾರ್ರುಗಳಿಂದಲಾಗಲಿ ಮತ್ತು ಆಯಾಯ ತಾಲ್ಲೂಕಿಗೆ ಸಂಬಂಧಪಟ್ಟ ರೇಂಜ್ ಆಫಿಸರ್ರುಗಳು ಶೇರಿ ಈ ಕೆಳಗೆ ಕಂಡ ತಾರೀಖು ಮತ್ತು ಸ್ಥಳದಲ್ಲಿ ಮಧ್ಯಾಹ್ನ 12 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜಿಗೆ ಇಡಲ್ಪಡುತ್ತೆ.

1. ದೇವರಾಯದುರ್ಗ	ಸ್ಟೇಟ್ ಫಾರೆಷ್ಟ್	6. ಬುಕ್ಕಾಪಟ್ಟಣ	ಸ್ಟೇಟ್ ಫಾರೆಷ್ಟ್
2. ಮದ್ದಗಿರಿ	ಡಿಟೋ	7. ತೀರ್ಥರಾಂಪುರ	ಡಿಟೋ
3. ಕೋಳಿಕಲ್ಲು ಮತ್ತು ಚಿಕ್ಕ ಮದ್ದಗಿರಿ	ಡಿಟೋ	8. ಮಂಚಲ್‌ಧೂರೇ	ಡಿಟೋ
4. ಹುಲಿಯೂರು ದುರ್ಗ	ಡಿಟೋ	9. ಅವ್ಯತಮಹಲ್	ಕಾವಲ್
5. ಕಂಪ್ಲಾಪುರ	ಡಿಟೋ		

1. ಹರಾಜು ಡೆಪ್ಯೂಟಿ ಕಮಿಷನರ ಸಾಹೇಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

ನಂಬರು.	ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಪರಾ.
1	ಮದ್ದಗಿರಿ ಮತ್ತು ಕೊರ್ಟಗಿರೆ ಸಬ್ ತಾಲ್ಲೂಕು	1—6—903	ಮದ್ದಗಿರಿ	ಹರಾಜು ತಾಲ್ಲೂಕಾನಾರು ಆಗಲಿ ಅಥವಾ ಅವಳ್ಳಿ ಬದಲಿ ಹೋಬಳಿನಾರೇ ಆಗಲಿ ಮಾಡಲ್ಪಡುವುದು.
2	ಶಿರಾ ತಾಲ್ಲೂಕು ...	6—6—903	ಶಿರಾ	
3	ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಮತ್ತು ಹುಳಿಯಾರು ಯಳನಡು ಹೋಬಳಿಗಳು.	8—6—903	ಚಿಕ್ಕನಾಯಿಕನಹಳ್ಳಿ	
4	ತಿಪಟೂರು ಮತ್ತು ತುರುವೆಕೆರೆ ಸಬ್ ತಾಲ್ಲೂಕು.	10—6—903	ತಿಪಟೂರು	
5	ಗುಬ್ಬಿ ತಾಲ್ಲೂಕು ..	15—6—903	ಗುಬ್ಬಿ	
6	ಕುಣಿಗಲ್ ತಾಲ್ಲೂಕು ..	12—6—903	ಕುಣಿಗಲ್	
7	ತುಮಕೂರು ತಾಲ್ಲೂಕು ...	16—6—903	ತುಮಕೂರು	

2. ಪಸಾರೆ ಜಿನಸಿ ಹೆಸರುಗಳ ತಪಶೀಲ್:—

1. ಅಳಲಿಕಾಯಿ
2. ತಾರೆಕಾಯಿ
3. ಹೊಂಗೇಬೀಜ
4. ಶೀಗೆಕಾಯಿ
5. ಹುಣಸೇಹಣ್ಣು
6. ಬ್ಯಾಲದ ಹಣ್ಣು
7. ಶೀತಾಫಲದ ಹಣ್ಣು
8. ಗೇರುಬೀಜ
9. ಸಾಮೇಜಕ್ಕೆ
10. ಮಡ್ಡಿ ಚಕ್ಕೆ
11. ದೊಡ್ಡ ಅಗಸೇ
12. ದಿಂಡಗದ ಗೋಂದು
13. ಕಾಡು ಅರಸಿನ
14. ಮರಡಿಪಪ್ಪು
15. ಕಲ್ಲುಹುವ್ವು
16. ಕಪಿಲವರಂಗು
17. ಜೇನುತುಪ್ಪ
18. ಜೇನುಮೇಣ
19. ತಗರಿಸಿ ಬೀಜ

3. ಹರಾಜು ಖೈದಾದ ಕೂಡ್ಲೆ ಛಡ ಸವಾಲ್‌ದಾರನು ಹರಾಜು ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಮೊಬಲಗನ್ನು ತೇವಣಿ ಇಡತಕ್ಕದ್ದು. ಬಾಕಿ ಹರಾಜು ಮೊಬಲಗು ಮಂಜೂರಾದ ಸಂಗತಿ ತಿಳಿಸಿದ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಈ ಹಕ್ಕುದಾರಿಯನ್ನು ಪುನಹ ಹರಾಜು ಮಾಡಿ ಅವನನ್ನು ಲುಕ್ಸಾನಿಗೆ ಗುರಿಮಾಡಲ್ಪಡುತ್ತೆ.

4. ಗೊತ್ತುಮಾಡಿದ ಕಾಲದೊಳಗಾಗಿ ಹರಾಜಿನ ಮೊಬಲಗನ್ನು ಕೊಡಲು ತಪ್ಪಿದರೆ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಜಮಾವಣಿ ಹಕ್ಕು ಪುನಹ ಹರಾಜು ಮಾಡಿ ಲುಕ್ಸಾನಿಗೆ ಆತನನ್ನು ಗುರಿಮಾಡುತ್ತೆ. ಈ ದುಸರೆ ಹರಾಜಿನಲ್ಲಿ ಏನಾದರು ನಷ್ಟ ಬಂದರೆ ಆ ನಷ್ಟಕ್ಕೆ ಅವಲ್ ಹರಾಜುದಾರ್ ಗುರಿಯಾಗತಕ್ಕದ್ದು. ಆದರೆ ಏನಾದರೂ ಜಾಸ್ತಿ ಹುಟ್ಟುವಳಿ ಆದರೆ ಅದರಲ್ಲಿ ಹಿಸ್ಸೆ ಸಲ್ಲಲಾರದು.

5. ಮುಂಚಿತವಾಗಿ ಡೆಪ್ಯೂಟಿ ಕಮಿಷನರ್ ಸಾಹೇಬರವರ ಮಂಜೂರಾತಿ ಪಡದ ಹೊರ್ತು ಕಂಟ್ರಾಕ್ಟ್‌ದಾರ್ ಸಬ್ ಕಂಟ್ರಾಕ್ಟ್ ಕೊಡಕೂಡದು.

6. ಇಜಾರೆದಾರನಾಗಲಿ ಅಥವಾ ಸಬ್ ಇಜಾರೆದಾರನಾಗಲಿ ಫಸಾರೆ ಜಿನಸಿ ಜಮಾಯಿಸುವ ಕೆಲಸಗಳಲ್ಲಿ ಅವನಕಡೆ ಏಜಂಟು ಅಥವಾ ನೌಕರರಗಳಿಂದ ನಡಿಯತಕ್ಕ ಕೃತ್ಯಗಳಿಗೆ ತಾನು ಖುದ್ದು ಸಮ್ಬಂಧಪಟ್ಟವನಾಗಿಯೂ ಮತ್ತು ಜವಾಬುದಾರನಾಗಿಯೂ ಇರಬೇಕು.

7. ಪೂರಾ ಹರಾಜು ಮೊಬಲಿಗೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ ಮಾಡಲ್ಪಡುವದು.

8. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿಯೂ ಮತ್ತು ಸ್ವಂತ ತೋಪುಗಳಲ್ಲಿಯೂ ಇರುವ ಮರಗಳ ಆವುರಾಯಿ ಫಸಲುಗಳನ್ನು ರೂಢಿಸಕೂಡದು.

9. ಗ್ರಾಮ ಆವುರಾಯಿ ಫಸಲ್ ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಸೇರಿರುವದಿಲ್ಲ.

ಎಸ್. ಕೇಷಗಿರಿರಾವ್,
ಫಾರ್ ಡೆಪ್ಯೂಟಿ ಕಮಿಷನರ್, ತುಮಕೂರು ಡಿಸ್ಟ್ರಿಕ್ಟ್.

ತಾರೀಖು 23ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ: —ಶಿವಮೊಗ್ಗಾ ಡಿಸ್ಟ್ರಿಕ್ಟು ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕಿನ ಬಾಬತು ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಯಲ್ಲಾ ತಾಲ್ಲೂಕುಗಳಲ್ಲಿರುವ ಪಪ್ಪಳಿ ಚಕ್ಕೆಯನ್ನು 1903ನೇ ಇಸವಿ ಜುಲೈ ಗುರ್ರೇ ಲಾಗಾಯತು 1904ನೇ ಇಸವಿ ಜೂನ್ ಆಖೈರ ವರಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ವಟ್ಟು ಸ್ವಾತಂತ್ರದ ಹಕ್ಕು ಬಹಿರಂಗವಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಜೂನ್ ತಾರೀಖು 15ರಲ್ಲು ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತದೆ.

ಹರಾಜು ಷರತ್ತು ಬಗ್ಯೆ 14—5—1903ನೇ ಮಾರ್ಕ್ಯಂ 19ನೇ ನಂ. ಗೆಜೆಟ್ 2ನೇ ಭಾಗ 210—211ನೇ ಪೇಜಗಳನ್ನು ನೋಡಬೇಕು.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ಪೊಲೀಸ್ ಇಲಾಖೆ.

ಖೈದಿ ಚಹರೆಪಟ್ಟಿ, ತಾಲ್ಲೂಕ್ ತೀರ್ಥಹಳ್ಳಿ.

ತಾರೀಖು 20ನೇ ಏಪ್ರೆಲ್ 1903.

ಜಂಜರ್ ನಂ.	ಕ್ರಮ ನಂ.	ಖೈದಿಗಳ ಹೆಸರು, ಜಾತಿ, ವಾಸಸ್ಥಾನ.	ಮೈಮೇಲೆ ಇರತಕ್ಕ ಕಲೆ ಗುರ್ತು ಮತ್ತು ಪ್ರಾಯ ವಯಸ್ಸು ವಗೈರೆ.	ತಂದೆ ಹೆಸರು, ನಾಮ ಸ್ಥಳ ಇ.	ಯಾವ ತಕ್ಸೀರು.	ಯಾವ ಕೋರ್ಟಿಗೆ.
1	1 1902—03	ಶಂಕರಭಟ್ಟ, ಕಮ್ಮಿ ಕನ್ನಾಟಕ ಬ್ರಾಹ್ಮಣ, ಭದ್ರರಾಜಪುರದ ವಾಸಿ, ಸುಮಾರು 24 ವರ್ಷ, ಬರಹ ಕಸಬು.	ಯಜಮಗೆಂಪು, ಸಮದೃಷ್ಟಿ, ಯಡ ಪಾರ್ಶ್ವದ ಬೆನ್ನುಮೇಲೆ 1 ಕಾಸಿನ ಅಗಲ ಕಲೆ ಹುಣ್ಣಿನದು ಇದೆ. ಬಲದ ಮುಂಗಾಲುಮೇಲೆ ಅಂದರೆ ಹರಡಿಸಮೇಲೆ ಹಳೆ ಘಾಯದ ಕಲೆ, ಎತ್ತರ 5 ಅಡಿ 6 ಅಂಗುಲ.	ಸುಬ್ರಾಯಭಟ್ಟ ಭದ್ರರಾಜ ಪುರದ ವಾಸಿ.	ಇರ್ಡಿಯ ಪೆನಲ್ ಕೋಡ್ 411.	ಶಿವಮೊಗ್ಗಾ ಡಿ॥ 1ನೇ ಅಡಿಷನಲ್ ಕೋರ್ಟಿನಲ್ಲಿ ವಿಚಾರಣೆ ಆಗಿ ನರ್ಮ ಕೋರ್ಟಿನಲ್ಲಿ 100 ರೂಪಾಯಿ ಸಜಾ ಆದ ಕ್ಯಾಲಂಡರ್ ಮೇಲೆ ಬೇಲ್ ಕೋರ್ಟಿನಲ್ಲಿ ತಿರ್ಮಾನವಾಗಿದೆ.

ಸಿ. ಹಾರ್ಡಿ,
ಪೊಲೀಸ್ ಸೂಪರಿಂಟೆಂಡೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮಾಗಡೀ ತಾಲ್ಲೂಕು ತಿಪ್ಪಸಂದ್ರದ ಹೋಬಳಿ ಜೋಡಿ ದಂಡೆನ ಹಳ್ಳಿ ಗ್ರಾಮವು ಸ್ ೧೯೦೩ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಮಾಗಡಿ ತಾಲ್ಲೂಕು ಕಚೇರಿ ಬಳಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆಂದು 1903ನೇ ಇಸವಿ ಮೇ ತಿಂಗಳು 21ನೇ ತಾರೀಖು ಮೈಸೂರು ಗೆಜೆಟ್ 2ನೇ ಭಾಗದ 228ನೇ ಪೇಜಿನಲ್ಲಿ ಘಾಯಿಷ್ ಆಗಿ ಇದೆ.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ನ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರನಾದ ಖಾಯಂಗುತ್ತಾದಾರ್ ರಾಮಸ್ವಾಮೈಯ್ಯನವರಿಂದ ಬರಬೇಕಾದ ಜಮೀರ್ ಕಂದಾಯದ ಬಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಖಾಯಂಗುತ್ತಾ ಕೋಲೂರು [illegible]ಪುರ ಗ್ರಾಮದಲ್ಲಿ ಅಮಲ್‌ದಾರ್ರ ರೂಬರೂಪ್ 1903ನೇ ಇಸವಿ ಜೂನ್ 28ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾ[illegible]ಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.